**ಎಂ.ವಿ.ಸಿ. ಸಂಖ್ಯೆ: 321/2024**
**ಪಿ. ಡಬ್ಲ್ಯೂ:1**

ದಿ:**10-03-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.
ಪಾಟೀ ಸವಾಲು: ಶ್ರೀ ಹೆಚ್.ಎ.ಟಿ. ವಕೀಲರಿಂದ: **3** ನೇ ಎದುರುದಾರರ ಪರವಾಗಿ:

ನಮ್ಮ ತಂದೆಯವರ ಕುಟುಂಬದ ಪಡಿತರ ಚೀಟಿ ಇರುತ್ತದೆ, ಅದನ್ನು ಹಾಜರುಪಡಿಸಲು ನಮಗೆ ತೊಂದರೆ ಇರುವುದಿಲ್ಲ. ನಮ್ಮ ಅಜ್ಜನ ಹೆಸರು ಈರೇಗೌಡ ಆಗಿರುತ್ತದೆ ಮತ್ತು ಅಜ್ಜಿ ಹೆಸರು ಮಲ್ಲಮ್ಮ ಆಗಿರುತ್ತದೆ. ಅವರುಗಳು ಈಗ ಜೀವಿತವಾಗಿ ರುವುದಿಲ್ಲ. ಅವರು ಯಾವಾಗ ಮೃತರಾಗಿರುತ್ತಾರೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ನಮ್ಮ ತಂದೆ ಹಾಗೂ ತಾಯಿ ಪ್ರತ್ಯೇಕವಾಗಿ ವಾಸವಾಗಿರುವುದಿಲ್ಲ, ಆದರೆ ಕೆಲಸದ ನಿಮಿತ್ತ ನಮ್ಮ ತಂದೆಯವರು ನಾಗರಹಳ್ಳಿಯಲ್ಲಿ ಓಡಾಡಿಕೊಂಡು ಇದ್ದರು. ನಾನು ಮತ್ತು ನಮ್ಮ ತಾಯಿ ನಮ್ಮ ತಂದೆಯಿಂದ ಪ್ರತ್ಯೇಕವಾಗಿ ವಾಸವಾಗಿದ್ದು, ಯಾವತ್ತೂ ಒಂದು ಕುಟುಂಬವಾಗಿ ಒಟ್ಟಿಗೇ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ತಾಯಿಯ ಪಡಿತರ ಚೀಟಿ ಮತ್ತು ನಮ್ಮ ತಂದೆಯ ಪಡಿತರ ಚೀಟಿ ಪ್ರತ್ಯೇಕವಾಗಿದ್ದವು ಎಂದರೆ ಸರಿಯಲ್ಲ. ನಮ್ಮ ತಂದೆಯ ವಯಸ್ಸಿನ ಕುರಿತಂತೆ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ನಾವು ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡುಗಳನ್ನು ಹಾಜರುಪಡಿಸಿರುತ್ತೇವೆ.

ನಮ್ಮ ತಂದೆಯವರ ವೃತ್ತಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರುಪಡಿಸಲು ನಮಗೆ ತೊಂದರೆ ಇರುವುದಿಲ್ಲ ಎಂದರೆ ಅವರು ಗಾರೆ ಕೆಲಸ ಮಾಡುತ್ತಿದ್ದುದರಿಂದ ಆ ಕುರಿತು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಮ್ಮ ತಂದೆಗೆ ಪ್ರತಿತಿಂಗಳು ರೂ.50,000/- ಆದಾಯ ಬರುತ್ತಿತ್ತು ಎಂದು ತೋರಿಸಲು ನಾವು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ನಮ್ಮ ಕುಟುಂಬದಲ್ಲಿ ಬಿಪಿಎಲ್ ಕಾರ್ಡು ಇರುತ್ತದೆ ಎಂದರೆ ಸರಿ.ನಮ್ಮ ತಂದೆಯವರ ಅಂಬ್ಯುಲೆನ್ಸ್ ವೆಚ್ಚ ಹಾಗೂ ಇತರೆ ವೆಚ್ಚಗಳ ಕುರಿತಂತೆ ಒಂದು ಲಕ್ಷ ರೂಪಾಯಿ ಖರ್ಚು ಮಾಡಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ನಮ್ಮ ತಂದೆಯವರಿಗೆ ದ್ವಿಚಕ್ರ ವಾಹನ ಚಲಾಯಿಸಲು ಪರವಾನಗಿ ಇದ್ದಿರಲಿಲ್ಲ. ಅರ್ಜಿಯ 22 ನೇ ಪ್ಯಾರಾದಲ್ಲಿ ಹೇಳಿಕೊಂಡಿರು ವಂತಹ ಮೋಟಾರ್ ಸೈಕಲ್ ಯಾವುದು ಎಂದರೆ ಆ ಸಮಯದಲ್ಲಿ ನಮ್ಮ ತಂದೆ ಯಾವುದೇ ಮೋಟಾರ್ ಸೈಕಲ್ಲಿನಲ್ಲಿ ಹೋಗುತ್ತಿರಲಿಲ್ಲ. ನಮ್ಮ ತಂದೆಯವರು ಟ್ರಾಕ್ಟರಿನಲ್ಲಿ

ಕುಳಿತುಕೊಂಡು ಪ್ರಯಾಣಿಸುತ್ತಿರಲಿಲ್ಲ. ಟ್ರಾಕ್ಟರ್ ಚಾಲಕನಿಗೆ ಪೆಟ್ಟಾಗಿರುವ ಕುರಿತಂತೆ ನನ್ನ ಹತ್ತಿರ ದಾಖಲೆಗಳು ಇರುವುದಿಲ್ಲ.

3 ನೇ ಎದುರುದಾರರಾದ ವಿಮಾ ಕಂಪೆನಿಯಲ್ಲಿ ವಿಮೆ ಹೊಂದಿರುವ ವಾಹನವು ಅಪಘಾತದಲ್ಲಿ ಭಾಗಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈಗ ಫೈನಾನ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಎಷ್ಟು ವರ್ಷಗಳಿಂದ ಮಾಡುತ್ತಿದ್ದೀರಿ ಎಂದರೆ ಸುಮಾರು 6-7 ತಿಂಗಳಿಂದ ಮಾಡುತ್ತಿದ್ದೇನೆ. ಅದಕ್ಕಿಂತ ಪೂರ್ವದಲ್ಲಿ ನಾನು ಸ್ಪರ್ಧಾತ್ಮಕ ಪರೀಕ್ಷೆಗಾಗಿ ವಿದ್ಯಾಭ್ಯಾಸ ಮಾಡುತ್ತಿದ್ದೆನು. ನಾನು ಬಿಸಿಎ ಪದವೀಧರನಾಗಿರುತ್ತೇನೆ. ನಮ್ಮ ತಾಯಿ ಗೃಹಿಣಿಯಾಗಿದ್ದರು. ನಾನು ಮತ್ತು ನಮ್ಮ ತಾಯಿ ಪೋಲೀಸರ ಮುಂದೆ ಮೃತ ರವಿಕುಮಾರ್ ಇವರಿಂದ ಹಲವಾರು ವರ್ಷಗಳಿಂದ ಪ್ರತ್ಯೇಕವಾಗಿ ವಾಸವಾಗಿರುತ್ತೇವೆ ಎಂದು ಹೇಳಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ಪ್ರತ್ಯೇಕವಾಗಿ ವಾಸವಾಗಿರುವುದರಿಂದ ಯಾವ ಕಾಲದಲ್ಲೂ ಮೃತನ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಕೇಳಿದಂತೆ ಪರಿಹಾರ ಪಡೆಯಲು ನಾವು ಅರ್ಹರಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನಮ್ಮ ತಾಯಿ ಸ್ವತಂತ್ರವಾಗಿ ದುಡಿಮೆ ಮಾಡುತ್ತಿದ್ದುದರಿಂದ ಮೃತನ ಆದಾಯದ ಮೇಲೆ ಅವಲಂಬಿತರಾಗಿರುವುದಿಲ್ಲ ಎಂದರೆ ಸರಿಯಲ್ಲ.

ಅಪಘಾತದ ಸಮಯದಲ್ಲಿ ಮೃತನಿಗೆ 48 ವರ್ಷಕ್ಕಿಂತ ಹೆಚ್ಚಿನ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ವಯಸ್ಸನ್ನು ಮತ್ತು ಹೆಚ್ಚಿನ ಆದಾಯವನ್ನು ತೋರಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯದ ಪ್ರಮಾಣಪತ್ರದಲ್ಲಿ ಮೋಟಾರ್ ಸೈಕಲ್ ಎಂದು ಹೇಳಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಶ್ರೀ ಬಿ.ಡಿ. ವಕೀಲರಿಂದ: **1** ಮತ್ತು **2** ನೇ ಎದುರುದಾರರ ಪರವಾಗಿ: ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವಂತೆ ಕೇಳಿಕೊಂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ:ಹೇ:ಕೇ:ಸ:ಇ:ಎ:ಒ:

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಎಂ.ಎ.ಸಿ.ಟಿ., ಚಿಕ್ಕಮಗಳೂರು.